# ಮೈಸೂರು ವಾರಿಯರ್ಸ್‌ನಿಂದ ಕ್ರಿಕೆಟ್ ಟ್ಯಾಲಂಟ್ ಹಂಟ್

## ಬೆಂಗಳೂರು–ಮೈಸೂರಿನಲ್ಲಿ ಸ್ಪರ್ಧೆಗಿಳಿದ ದಾಖಲೆ ಸಂಖ್ಯೆಯ 535 ಆಟಗಾರರು

**ಮೈಸೂರು, ಜುಲೈ 20, 2019:** ಮೈಸೂರು ವಾರಿಯರ್ಸ್‌ನ ಮಾಲೀಕರಾಗಿರುವ ಎನ್‌ಆರ್ ಸಮೂಹ ಹಮ್ಮಿಕೊಂಡಿದ್ದ ಕ್ರಿಕೆಟ್ ಪ್ರತಿಭಾನ್ವೇಷಣೆಯ (ಟ್ಯಾಲಂಟ್ ಹಂಟ್) ಆರನೇ ಆವೃತ್ತಿಯು ಇಂದು ಯಶಸ್ವಿಯಾಗಿ ಸಮಾಪ್ತಿಗೊಂಡಿತು. ಬೆಂಗಳೂರಿನ ಯಲಹಂಕದ ಜಸ್ಟ್ ಕ್ರಿಕೆಟ್ ಅಕಾಡೆಮಿ ಹಾಗೂ ಮೈಸೂರಿನ ಎಸ್‌ಡಿಎನ್‌ಆರ್ ಕ್ರೀಡಾಂಗಣದಲ್ಲಿ ಪ್ರತಿಭಾನ್ವೇಷಣೆಯ ಪಂದ್ಯಗಳು ನಡೆದವು.

ಮೈಸೂರಿನಲ್ಲಿ ಇಂದು ಮುಕ್ತಾಯಗೊಂಡ ಪಂದ್ಯದಲ್ಲಿ ಸುಮಾರು 215 ಉತ್ಸಾಹಿ ಆಟಗಾರರು ಭಾಗವಹಿಸಿದ್ದರು. ಅವರಲ್ಲಿ 35 ಬ್ಯಾಟ್ಸ್‌ಮನ್‌ಗಳು, 58 ಜನ ಆಲ್ ರೌಂಡರ್‌ಗಳು 32 ಜನ ಸ್ಪಿನರ್‌ಗಳು, 85 ಜನ ವೇಗದ ಬೌಲರ್‌ಗಳು ಮತ್ತು 05 ಜನ ವಿಕೆಟ್ ಕೀಪರ್‌ಗಳು ಇದ್ದರು.

ಬೆಂಗಳೂರಿನ ಯಲಹಂಕದ ಜಸ್ಟ್ ಕ್ರಿಕೆಟ್ ಅಕಾಡೆಮಿಯಲ್ಲಿ ನಡೆದ ಆಯ್ಕೆ ಪಂದ್ಯಾವಳಿಯಲ್ಲಿ 300 ಯುವ, ಉತ್ಸಾಹಿ ಕ್ರಿಕೆಟ್ ಆಟಗಾರರು ಸ್ಪರ್ಧೆಗಿಳಿದು ತಮ್ಮ ಅದೃಷ್ಟವನ್ನು ಪರೀಕ್ಷೆಗೆ ಒಡ್ಡಿದ್ದರು. ಅವರಲ್ಲಿ 70 ಜನ ಮಧ್ಯಮ ವೇಗಿ ಬೌಲರ್‌ಗಳು, 50 ಜನ ಸ್ಪಿನರ್‌ಗಳು, 75 ಬ್ಯಾಟ್ಸ್‌ಮನ್‌ಗಳು, 80 ಜನ ಆಲ್ ರೌಂಡರ್‌ಗಳು ಮತ್ತು 25 ಜನ ವಿಕೆಟ್ ಕೀಪರ್‌ಗಳು ಇದ್ದರು.

ಈ ಪೈಕಿ ಟೂ ಲೆಗ್ಸ್ ಆಟಗಾರರಿಂದ 40–50 ಜನ ಆಯ್ಕೆಯಾಗಿದ್ದು, ಇದೇ 23ರಂದು ಮಂಡ್ಯದ ಪಿಇಟಿ ಮೈದಾನದಲ್ಲಿ ನಡೆಯಲಿರುವ ಟ್ರಯಲ್ ಪಂದ್ಯಾವಳಿಯಲ್ಲಿ ಆಟಗಾರರು ಭಾಗವಹಿಸಲಿದ್ದಾರೆ. ಆಯ್ಕೆಯಾಗುವ ಆಟಗಾರರು ಸೈಕಲ್ ಪ್ಯೂರ್ ಅಗರಬತ್ತೀಸ್ ಪ್ರಾಯೋಜಕತ್ವದಲ್ಲಿ ನಡೆಯಲಿರುವ 2019ರ ಕೆಪಿಎಲ್‌ನಲ್ಲಿ ಆಡುವ ಅವಕಾಶ ಪಡೆಯುತ್ತಾರೆ.

**ಈ ಪ್ರತಿಭಾನ್ವೇಷಣೆ ಬಗ್ಗೆ ತಮ್ಮ ಅಭಿಪ್ರಾಯ ಹಂಚಿಕೊಂಡ ಮೈಸೂರು ವಾರಿಯರ್ಸ್‌ನ ಮಾಲೀಕರಾದ ಶ್ರೀ ಅರ್ಜುನ್ ರಂಗ,** 'ಪ್ರತಿಭಾನ್ವೇಷಣೆಗೆ ಕರ್ನಾಟಕದ ಕ್ರಿಕೆಟ್ ಸಮುದಾಯದಿಂದ ಪ್ರತಿವರ್ಷವೂ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ. ಇಷ್ಟು ದೊಡ್ಡ ಸಂಖ್ಯೆಯ ಕ್ರಿಕೆಟ್ ಪ್ರತಿಭೆಗಳ ಉತ್ಸಾಹ ಮತ್ತು ಶ್ರದ್ಧೆ ಕಂಡು ನಮಗೆ ಸಂತೋಷ ಆಯಿತು. ಈ ಪ್ರತಿಭೆಗಳಲ್ಲಿ ಕೆಲವರನ್ನೇ ಆಯ್ಕೆ ಮಾಡುವುದು ಕಠಿಣವಾದರೂ, ಈ ಪ್ರಕ್ರಿಯೆ ಯಾವಾಗಲೂ ಮೈಸೂರು ವಾರಿಯರ್ಸ್ ತಂಡಕ್ಕೆ ಅದ್ಭುತ ಆಟಗಾರರನ್ನು ನೀಡಿದೆ' ಎಂದರು.

ಇಲ್ಲಿ ತಮ್ಮ ಅತ್ಯುತ್ತಮ ಪ್ರದರ್ಶನ ನೀಡಿ ಆಯ್ಕೆಯಾಗುವ ಆಟಗಾರರು 2019ರ ಕೆಪಿಎಲ್ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ. ಸೈಕಲ್ ಪ್ಯೂರ್ ಅಗರಬತ್ತೀಸ್ ಪ್ರಾಯೋಜಕತ್ವದಲ್ಲಿ ನಡೆಯಲಿರುವ 2019ರ ಕೆಪಿಎಲ್ ಪಂದ್ಯಾವಳಿಯಲ್ಲಿ ಭಾಗವಹಿಸುವ ಹಾಗೂ ಅಂತಿಮ ಗೆಲುವಿನ ಹಂಬಲ ಹೊಂದಿದ ಆಟಗಾರರು ಪರಸ್ಪರ ಬಿರುಸಿನ ಸ್ಪರ್ಧೆ ಒಡ್ಡಿದರು.

**ಮೈಸೂರು ವಾರಿಯರ್ಸ್ ಕುರಿತು:** ಮೈಸೂರು ವಾರಿಯರ್ಸ್ ತಂಡ ಕೆಪಿಎಲ್ ಅನ್ನು 2014ರಲ್ಲಿ ಪ್ರವೇಶಿಸಿ ಅದೇ ಆವೃತ್ತಿಯಲ್ಲಿ ಚಾಂಪಿಯನ್ ಆಗಿ ಬೆಳೆಯಿತು. 2014ರಲ್ಲಿ ಮೈಸೂರು ವಾರಿಯರ್ಸ್‌ನ ಇಬ್ಬರು ತಾರಾ ಕ್ರಿಕೆಟಿಗರು ಐಪಿಎಲ್ ಪ್ರವೇಶಿಸಿದರು ಮತ್ತು ಈ ಪರಂಪರೆ ಹಾಗೆಯೇ ಮುಂದುವರೆಯಿತು. ಮೈಸೂರು ವಾರಿಯರ್ಸ್‌ನಿಂದ ಆಯ್ಕೆಯಾದ ಬಹಳಷ್ಟು ಆಟಗಾರರು ಭಾರತದ ಕ್ರಿಕೆಟ್ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಮೈಸೂರು ವಾರಿಯರ್ಸ್ ತಂಡದ ಗೀತೆಯನ್ನು ಜನಪ್ರಿಯ ಸಂಗೀತ ನಿರ್ದೇಶಕ ಶ್ರೀ ರಘು ದೀಕ್ಷಿತ್ ಸಂಯೋಜಿಸಿ ಹಾಡಿದ್ದಾರೆ. ಕಳೆದ ಸರಣಿಯಲ್ಲಿ ಮೈಸೂರು ವಾರಿಯರ್ಸ್‌ಗೆ ದೊರೆತ ಸದೃಢ ಪ್ರಾಯೋಜಕತ್ವ ತಂಡ ಗಳಿಸಿದ ಮಾನ್ಯತೆಗೆ ಸಾಕ್ಷಿಯಾಗಿದೆ. ಇದು ಒಂದೇ ಬಗೆಯ ಆಲೋಚನೆ ಹೊಂದಿರುವ ಸಮಾನ ಮನಸ್ಕ ಜನರನ್ನು ಒಗ್ಗೂಡಿಸಿ ಅವರನ್ನು ಭಾರತದಲ್ಲಿ ಕ್ರೀಡೆಗೆ ಉತ್ತೇಜಿಸಲು ಶ್ರಮಿಸುತ್ತಿದೆ. ಮೈಸೂರು ವಾರಿಯರ್ಸ್ ಯುವ ಕ್ರಿಕೆಟ್ ಪಟುಗಳಿಗೆ ಟಿ–20 ಮಾದರಿಯಲ್ಲಿ ವೃತ್ತಿಪರ ಕ್ರಿಕೆಟ್‌ನ ಅನುಭವವನ್ನು ನೀಡುವ ಜೊತೆಗೆ ಅವರ ಪ್ರತಿಭೆಯನ್ನು ಬೆಳಕಿಗೆ ತರುವ ಪ್ರಯತ್ನದಲ್ಲಿದೆ.

**ಎನ್.ಆರ್. ಸಮೂಹದ ಬಗ್ಗೆ:** ಮೈಸೂರು ಮೂಲದ ಎನ್‌ಆರ್ ಸಮೂಹವನ್ನು ಸಮಾಜದ ಬಗ್ಗೆ ವಿಶೇಷ ಕಳಕಳಿ ಹೊಂದಿರುವ ಶ್ರೀ ಎನ್. ರಂಗರಾವ್ ಅವರು 1948ರಲ್ಲಿ ಹುಟ್ಟು ಹಾಕಿದರು. ಆರಂಭದಲ್ಲಿ ಗೃಹ ಕೈಗಾರಿಕೆಯಾಗಿ ಸ್ಥಾಪನೆಯಾದ ಎನ್‌ಆರ್ ಸಮೂಹವು ಇದೀಗ ಭಾರತದಲ್ಲಿ ಮತ್ತು ವಿದೇಶದಲ್ಲಿ ಸ್ಥಾಪಿತ ಉಪಸ್ಥಿತಿಯನ್ನು ಹೊಂದಿರುವ ಒಂದು ಯಶಸ್ವಿ ಸಂಘಟಿತ ಬೃಹತ್ ಉದ್ಯಮ ಸಂಸ್ಥೆಯಾಗಿ ಹೊರಹೊಮ್ಮಿದೆ. ಕ್ರಿಯಾತ್ಮಕ ಏರ್‌ಕೇರ್ ಉತ್ಪನ್ನಗಳು (ಲಿಯಾ ಬ್ರಾಂಡ್‌ನ ಕೊಠಡಿ ಫ್ರೆಶ್ನರ್‌ಗಳು ಮತ್ತು ಕಾರು ಫ್ರೆಶ್ನರ್‌ಗಳು), ಮನೆ ಸುಗಂಧ ಉತ್ಪನ್ನಗಳು (IRIS), ಎನ್‌ಇಎಸ್‌ಎಸ್‌ಓ (NESSO) ಸೇರಿದಂತೆ ವಿವಿಧ ವಿಭಾಗಗಳಲ್ಲಿ ತನ್ನ ಅಸ್ಥಿತ್ವವನ್ನು ಹೊಂದಿದೆ. ಚಾರಿಟಿ ಘಟಕವಾದ "ದಿ ಎನ್‌ಆರ್ ಫೌಂಡೇಶನ್" ಮೂಲಕ ಸಾಮಾಜಿಕ ಬದ್ಧತೆಯನ್ನು ಪ್ರಕಟಿಸಿದೆ. ಸುಸ್ಥಿರ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ಈ ಕಂಪನಿಗೆ ವಿಶ್ವದಲ್ಲಿಯೇ ಇಂಗಾಲದ ಪ್ರಮಾಣವನ್ನು ಕಡಿಮೆಗೊಳಿಸುವ ಪರಿಹಾರಗಳ ಪ್ರಮುಖ ಪೂರೈಕೆದಾರ ಕಂಪನಿ ಆಗಿರುವ ಅಮೆರಿಕ ಮೂಲದ ಕಾರ್ಬನ್ ನ್ಯಾಚುರಲ್ ಕಂಪನಿ ವತಿಯಿಂದ ಕಾರ್ಬನ್ ನ್ಯೂಟ್ರಲ್ ಕಂಪನಿ ಎನ್ನುವ ಪ್ರಮಾಣಪತ್ರ ದೊರೆತಿದೆ. ಗುಣಮಟ್ಟ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಎತ್ತಿತೋರಿಸುವ ಸಲುವಾಗಿ ತನ್ನ ಎಲ್ಲಾ ಉತ್ಪನ್ನಗಳ ಮೇಲೆ ಇಂಗಾಲದ ತಟಸ್ಥ ಚಿಹ್ನೆಯನ್ನು ಬಳಸಲು ಕಂಪನಿಗೆ ಈ ಪ್ರಮಾಣಪತ್ರ ಅರ್ಹತೆ ನೀಡಿದೆ. ಎನ್‌ಆರ್ ಸಮೂಹವನ್ನು ಇಂದು ಕುಟುಂಬದ ಮೂರನೇ ಪೀಳಿಗೆ ಮುನ್ನಡೆಸುತ್ತಿದೆ. ಎನ್‌ಆರ್ ಸಮೂಹದ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳಲು ಭೇಟಿಕೊಡಿ: http://www.nrgroup.co.in/.

ಮಾಧ್ಯಮ ಸಂಪರ್ಕಕ್ಕೆ: **umabai.ck@nrrs.net or call 91 7022548894**